ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರ್‌ರವರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/02/2015-16. ದಿನಾಂಕ: 28-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಯರಮುದ್ದಪ್ಪರ ಚೌಡಮ್ಮ ತಾಯಿ ದುರುಗಮ್ಮ<br>ಬಸವೇಶ್ವರ ಅಂಜೀನೇಯ ಸ್ವಾಮಿ ಬೀದಿ<br>ಶಿವಪುರ ಗ್ರಾಮ<br>2)ಗೊಲ್ಲರ ವೀರಪ್ಪ ತಂದೆ ಶೀಗಪ್ಪ<br>ಶ್ರೀರಾಮದೇವರ ಬಡಾವಣೆ<br>ಶಿವಪುರ ಗೊಲ್ಲರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೂಡ್ಲಿಗಿ |
| ಕೂಡ್ಲಿಗಿ ತಾಲೂಕು ಶಿವಪುರ ಗ್ರಾಮದ ಸನಂ 502/1ಪೈಕಿ. ವಿಸ್ತೀರ್ಣ 0-26 ಸೆಂಟ್ಸು ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಶಿವಪುರ ಗ್ರಾಮದ ಸನಂ 502/1ಪೈಕಿ. ವಿಸ್ತೀರ್ಣ 0-26 ಸೆಂಟ್ಸು ಜಮೀನನ್ನು ಸದರಿ ತಾಲೂಕು ಶಿವಪುರ ಗೊಲ್ಲರಹಟ್ಟಿ ಗ್ರಾಮದ ಗೊಲ್ಲರ ವೀರಪ್ಪ ತಂದೆ ಶೀಗಪ್ಪ ಇವರಿಂದ ಸದರಿ ಗ್ರಾಮದ ಯರಮುದ್ದಪ್ಪರ ಚೌಡಮ್ಮ ತಾಯಿ ದುರುಗಮ್ಮ ಇವರು ದಿನಾಂಕ 13-01-2016 ರ ಡಾಕ್ಯುಮೆಂಟ್ ನಂಬರ್: 3236/2015-16 ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಶಿವಪುರ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 18-01-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಕ್ರಯದಾರರ ಹೆಸರಿಗೂ ಹಾಗೂ ಕೃಷಿ ಭೂಮಿ ಲಗತ್ತಿಸಿರುವ ಪಹಣಿಗೂ ತಾಳೆ ಇಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 63/2015-16. ದಿನಾಂಕ 19-02-2016. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 18-03-2016. ರಿಂದ 28-06-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಶಿವಪುರ ಸನಂ 502/1ಪೈಕಿ. ವಿಸ್ತೀರ್ಣ 0-26 ಸೆಂಟ್ಸು ಜಮೀನನ್ನು ಸದರಿ ತಾಲೂಕು ಶಿವಪುರ ಗೊಲ್ಲರಹಟ್ಟಿ ಗ್ರಾಮದ ಗೊಲ್ಲರ ವೀರಪ್ಪ ತಂದೆ ಶೀಗಪ್ಪ ಇವರಿಂದ ದಿನಾಂಕ 13-01-2016 ರ ಡಾಕ್ಯುಮೆಂಟ್ ನಂಬರ್: 3236/2015-16. ರ ಪ್ರಕಾರ ರೂ:45.000/-ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಹಾಗೂ ನನ್ನ ಹೆಸರಲ್ಲಿ ಸಂಡೂರು ತಾಲೂಕು ಚಿಕ್ಕಕೆರೆಯಾಗಿನಹಳ್ಳಿ ಗ್ರಾಮಕ್ಕೆ ಸೇರಿದ ಸನಂ 410ಎ/2. ವಿಸ್ತೀರ್ಣ 0-85 ಸೆಂಟ್ಸು ಜಮೀನು ಇದ್ದು ಸದರಿ ಜಮೀನಿನ ಪಹಣಿಯಲ್ಲಿ ನಾಯ್ಕರ ದೊಡ್ಡಚೌಡಮ್ಮ ತಂದೆ ಲಕ್ಷ್ಮಪ್ಪ ಎಂದು ಇದ್ದು ಚುನಾವಣಾ ಗುರುತಿನ ಚೀಟಿಯಲ್ಲಿ ಚೌಡಮ್ಮ

ಯರಮುದ್ದಪುರ ಎಂದು ಇರುತ್ತದೆ. ಈ ಎರಡು ಹೆಸರುಗಳು ಒಂದೇ ಆಗಿರುತ್ತವೆ ಎಂಬುದರ ಬಗ್ಗೆ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಶಿವಪುರ ಗ್ರಾಮದ ಸನಂ 502/1ಪೈಕಿ. ವಿಸ್ತೀರ್ಣ 0-26 ಸೆಂಟ್ಸು ಜಮೀನನ್ನು ದಿನಾಂಕ 13-01-2016 ರ ಡಾಕ್ಯುಮೆಂಟ್ ನಂಬರ್: 3236/2015-16 ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಯರಮುದ್ದಪ್ಪರ ಚೌಡಮ್ಮ ತಾಯಿ ದುರುಗಮ್ಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 28-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು, ಕೂಡ್ಲಿಗಿ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಯರಮುದ್ದಪ್ಪರ ಚೌಡಮ್ಮ ತಾಯಿ ದುರುಗಮ್ಮ ಬಸವೇಶ್ವರ ಅಂಜೀನೇಯ ಸ್ವಾಮಿ ಬೀದಿ ಶಿವಪುರ ಗ್ರಾಮ ವೀರಪ್ಪ ತಂದೆ ಶೀಗಪ್ಪ ಶ್ರೀ...ದೇವರ ಬಡಾವಣೆ ಶಿವಪುರ ಗೊಲ್ಲರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೂಡ್ಲಿಗಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕವೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ದೃಢೀಕೃತ ನಕಲು

ಶಿರಸ್ತೇದಾರರು
ತಾಲೂಕು ಕಛೇರಿ
ಕೂಡ್ಲಿಗಿ.